# ಗಾಂಧೀಜಿ ಮೌಲ್ಯ ಕೊಲ್ಲಲು ಸಾಧ್ಯವಿಲ್ಲ: ಸಿಎಂ

## ಕೆಪಿಸಿಸಿ ಕಚೇರಿಯಲ್ಲಿ ಹುತಾತ್ಮರ ದಿನಾಚರಣೆ | ಗಾಂಧಿ ಹೆಜ್ಜೆ ಗುರುತು ಅಳಿಸಲು ಬಿಜೆಪಿಯಿಂದ ಯತ್ನ: ಡಿಕೆಶಿ ಕಿಡಿ




ಕೆಪಿಸಿಸಿ ಕಚೇರಿಯಲ್ಲಿ ಗುರುವಾರ ನಡೆದ ಹುತಾತ್ಮರ ದಿನದ ಅಂಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಹಾತ್ಮ ಗಾಂಧೀಜಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮಹಾತ್ಮ ಗಾಂಧೀಜಿ ಅವರ ಮೌಲ್ಯಗಳನ್ನು ಮತಾಂಧ ನಾಥೂರಾಮ್ ಗೋಡ್ಸೆಯಾಗಲಿ ಅಥವಾ ಇನ್ಯಾರಿಂದಲೂ ಕೊಲ್ಲಲು ಸಾಧ್ಯವಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಗುರುವಾರ ಕ್ವೀನ್ಸ್ ರಸ್ತೆಯಲ್ಲಿರುವ ಕೆಪಿಸಿಸಿ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಹುತಾತ್ಮರ ದಿನಾಚರಣೆಯಲ್ಲಿ ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಿ ಮಾತನಾಡಿ, ಗಾಂಧೀಜಿ ತತ್ವಾದರ್ಶಗಳು ಇಂದಿಗೂ ಪ್ರಸ್ತುತ. ತನ್ನ ಜೀವನವೇ ಒಂದು ಸಂದೇಶ ಎಂದು ನುಡಿದಿದ್ದ ಗಾಂಧೀಜಿ ಅವರ ಹೋರಾಟದ ಬದುಕು ಪ್ರೇರಣಾದಾಯಕ. 1948 ಜ.30ರಂದು ಗಾಂಧೀಜಿ ಅವರನ್ನು ಗೋಡ್ಸೆ ಹತ್ಯೆ ಮಾಡಿದ ದಿನ. ಗಾಂಧೀಜಿ ಇಹಲೋಕ ತ್ಯಜಿಸಿದ್ದರೂ ಅವರ ಸತ್ಯ, ಅಹಿಂಸೆ ಹೋರಾಟದ ಮೌಲ್ಯಗಳನ್ನು ಕೊನೆಗೊಳಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದರು.

ಡಿಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿ, ಬಿಜೆಪಿಯವರು ಗಾಂಧಿ ಅವರ ಹೆಜ್ಜೆ ಗುರುತುಗಳನ್ನು ಅಳಿಸುವ ಕೆಲಸ ಮಾಡುತ್ತಿದ್ದಾರೆ. ನಾವು ಅದನ್ನು ಉಳಿಸುವ ಕೆಲಸ ಮಾಡಬೇಕು. ಗಾಂಧಿ ಅವರ ತತ್ವಗಳನ್ನು ಒಪ್ಪದ ಬಿಜೆಪಿಯವರು ಅವರ ಪ್ರತಿಮೆ ಕೆಳಗೆ ಕುಳಿತು ಪ್ರತಿಭಟನೆ ಮಾಡುತ್ತಾರೆ. ಸ್ವದೇಶಿ ಆಲೋಚನೆ ಹೇಳಿಕೊಟ್ಟವರು ಗಾಂಧೀಜಿ. ಪ್ರಧಾನಿ ಅವರು ಇದನ್ನೇ ಮೇಕ್ ಇನ್ ಇಂಡಿಯಾ ಎಂದು ಹೇಳುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

**ವರ್ಷಪೂರ್ತಿ ಗಾಂಧಿ ಕಾರ್ಯಕ್ರಮ:** ಗಾಂಧಿ ಅವರ ಸಂದೇಶಗಳನ್ನು ಪ್ರಚಾರ ಮಾಡಲು ರಾಜ್ಯದಾದ್ಯಂತ ವರ್ಷ ಪೂರ್ತಿ ಜೈ ಬಾಪು, ಜೈ ಭೀಮ್, ಜೈ ಸಂವಿಧಾನ ಕಾರ್ಯಕ್ರಮವನ್ನು ಮಾಡಬೇಕು ಎನ್ನುವ ಆಲೋಚನೆ ಸರ್ಕಾರದ ಮುಂದಿದ್ದು, ಗಾಂಧಿ ಭಾರತ ಕಾರ್ಯಕ್ರಮ ಆಚರಣಾ ಸಮಿತಿ ನೀಡಿರುವ ವರದಿ ಅನುಷ್ಠಾನದ ಬಗ್ಗೆ ಬಜೆಟ್ ವೇಳೆ ಸಿಎಂ ತಿಳಿಸಬಹುದು. ಇದರ ಬಗ್ಗೆ ಎಐಸಿಸಿ ಅಧ್ಯಕ್ಷರ ಬಳಿಯೂ ಮನವಿ ಮಾಡಿದ್ದೇನೆ ಎಂದು ಡಿಸಿಎಂ ಹೇಳಿದರು.

### ಕುಂಭಮೇಳದಲ್ಲಿರುವ ಕನ್ನಡಿಗರ ರಕ್ಷಣೆಗೆ ಕ್ರಮ

ಪ್ರಯಾಗ್ ರಾಜ್ ಕುಂಭಮೇಳದ ಕಾಲ್ತುಳಿತದ ದುರಂತದಲ್ಲಿ ಬೆಳಗಾವಿಯ ನಾಲ್ವರು ಮೃತಪಟ್ಟಿರುವ ಮಾಹಿತಿ ದೃಢಪಟ್ಟಿದೆ. ಘಟನೆಯಲ್ಲಿ ಗಾಯಗೊಂಡ ಕನ್ನಡಿಗರನ್ನು ಕರೆತರಲು ಏರ್‌ಆ್ಯಂಬುಲೆನ್ಸ್ ವ್ಯವಸ್ಥೆ ಮಾಡಲಾಗಿದ್ದು, ಬೆಳಗಾವಿಯ ಹಿರಿಯ ಅಧಿಕಾರಿಗಳು ಅವರನ್ನು ಕರೆತರಲಿದ್ದಾರೆ. ಜಿಲ್ಲಾ ಸಚಿವರು ಈ ಪರಿಹಾರ ಕ್ರಮಗಳ ಬಗ್ಗೆ ಅಧಿಕಾರಗಳ ಜೊತೆ ಚರ್ಚಿಸಲಿದ್ದಾರೆ ಎಂದು ಸಿದ್ದರಾಮಯ್ಯ ತಿಳಿಸಿದರು.

## ಗಾಂಧೀಜಿ ಧ್ಯಾನಿಸಬೇಕಾದ ವ್ಯಕ್ತಿ: ಎಚ್‌ಕೆ

### ಗಾಂಧೀಜಿ ಕಾಯಂ ಛಾಯಾಚಿತ್ರ ಪ್ರದರ್ಶನ ಉದ್ಘಾಟಿಸಿದ ಕಾನೂನು ಸಚಿವ



ಕರ್ನಾಟಕ ಗಾಂಧಿ ಸ್ಮಾರಕ ನಿಧಿ 75ನೇ ವರ್ಷಾಚರಣೆ ಮತ್ತು ಸರ್ವೋದಯ ದಿನಾಚರಣೆಯಲ್ಲಿ ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ.ಪಾಟೀಲ್ ಅವರು ಮಹಾ ಮಾನವ ಲಿಯೋ ಟಾಲ್‌ಸ್ಟಾಯ್ ಕೃತಿ ಬಿಡುಗಡೆ ಮಾಡಿದರು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ದೇಶದಲ್ಲಿ ಪ್ರಸ್ತುತ ಗಾಂಧೀ ಭಾರತ ಒಂದು ಕಡೆ, ಗೋಡ್ಸೆ ಭಾರತ ಇನ್ನೊಂದು ಕಡೆಯಿದ್ದು, ಈ ಬಗ್ಗೆ ಎಲ್ಲರೂ ಜಾಗೃತರಾಗಬೇಕು ಎಂದು ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ.ಪಾಟೀಲ್ ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ 75ನೇ ವರ್ಷಾಚರಣೆ ಮತ್ತು ಸರ್ವೋದಯ ದಿನಾಚರಣೆಗೆ ಚಾಲನೆ, 'ಮಹಾತ್ಮಾ ಗಾಂಧಿ ಕಾಯಂ ಛಾಯಾಚಿತ್ರ ಪ್ರದರ್ಶನ ಉದ್ಘಾಟನೆ' ಮತ್ತು 'ಗಾಂಧಿ ವಿಚಾರಧಾರೆಗಳ ಹಾಗೂ ಮಹಾ ಮಾನವ ಲಿಯೋ ಟಾಲ್‌ಸ್ಟಾಯ್ ಕೃತಿಗಳ ಬಿಡುಗಡೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಗಾಂಧೀಜಿಯನ್ನು ತಿಳಿಯದೇ ಮೌಢ್ಯತೆಯಿಂದ ಅವರ ಬಗ್ಗೆ ಲಘುವಾಗಿ ಮಾತನಾಡಲಾಗುತ್ತಿದೆ. ಗಾಂಧೀಜಿ ಚರ್ಚಿಸುವ ವಿಷಯ, ವ್ಯಕ್ತಿ ಅಲ್ಲ. ಭಾರತೀಯರು ಧ್ಯಾನಿಸಬೇಕಾದ ವ್ಯಕ್ತಿ. ಅವರು ದೇಶದ ಆತ್ಮವಾದರೆ, ಜಗತ್ತಿಗೆ ಮಹಾತ್ಮರಾಗಿದ್ದಾರೆ. ಅವರು ಸರ್ವಕಾಲಕ್ಕೂ ಜಾಗತಿಕ ಮಟ್ಟದಲ್ಲಿ ಯುವಕರಿಗೆ ರೋಲ್ ಮಾಡೆಲ್ ಆಗಿರಲಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ನಾಡೋಜವೂಡೆ ಪಿ.ಕೃಷ್ಣ ಮಾತನಾಡಿ, ಗಾಂಧೀಜಿ ಕಾಯಾ, ವಾಚಾ, ಮನಸ್ಸಿನಲ್ಲಿ ಒಂದೇ ಆಗಿದ್ದರು. ಸಾರ್ವಜನಿಕ ಜೀವನದಲ್ಲಿ ಪಾರದರ್ಶಕತೆ ಕಾಯ್ದುಕೊಂಡು ಬಂದಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಜನತೆಯಿಂದ ಸ್ವೀಕರಿಸಿದ ಒಂದೊಂದು ಪೈಸೆಗೂ ಸಮರ್ಪಕವಾದ ಲೆಕ್ಕ ಇಟ್ಟುಕೊಂಡಿದ್ದ ಅವರ ಬದುಕಿನ ಪ್ರತಿ ಪುಟವೂ ನಮಗೆ ಪಾಠ ಎಂದು ಹೇಳಿದರು.

ಭಾರತೀಯ ವಿದ್ಯಾಭವನ ನಿರ್ದೇಶಕಿ ಪ್ರೊ.ಮೀನಾ ದೇಶಪಾಂಡೆ ಅವರು ಗಾಂಧಿ ಮತ್ತು ಸರ್ವೋದಯ ದತ್ತಿ ಉಪನ್ಯಾಸ ನೀಡಿದರು. ಭಾರತೀಯ ವಿದ್ಯಾಭವನದ ಎಚ್.ಎನ್.ಸುರೇಶ್, ಇತಿಹಾಸ ಪ್ರಾಧ್ಯಾಪಕ ಡಾ.ಬಸವರಾಜ ಎನ್. ಅಕ್ಕಿ ಸೇರಿ ಇತರರಿದ್ದರು.

## ಸುದ್ದಿ ಸಿಂಚನ

### ಆನೇಕಲ್‌ನ ಭ್ರಮರಾಂಭ ದೇಗುಲದಲ್ಲಿ ಇಂದಿನಿಂದ ಪ್ರತಿಷ್ಠಾಪನೆ ಕಾರ್ಯ



**ಆನೇಕಲ್:** ನಗರದ ಯುವಕರ ಪರಿಶ್ರಮದಿಂದ ನವೀಕರಿಸಲಾದ ಪುರಾತನ ದೇವಾಲಯ ಶ್ರೀ ಭ್ರಮರಾಂಭ ಸಹಿತ ಅಮೃತ ಮಲ್ಲಿಕಾರ್ಜುನ ದೇವಾಲಯದಲ್ಲಿ ಜ.31ರಿಂದ ಪ್ರತಿಷ್ಠಾಪನೆ ಕಾರ್ಯಕ್ರಮ ನೆರವೇರಲಿದೆ ಎಂದು ಪ್ರಧಾನ ಅರ್ಚಕ ಬಿ.ಎನ್.ದೀಕ್ಷಿತ್ ತಿಳಿಸಿದ್ದಾರೆ. ದಿವ್ಯಶ್ರೀ ಹಾಗೂ ಶ್ರೀ ದಿನೇಶ್ ಗುರೂಜಿ ಅವರು ಜ.31ರಂದು ಪ್ರತಿಷ್ಠಾಪನಾ ಕಾರ್ಯಕ್ಕೆ ಚಾಲನೆ ನೀಡಲಿದ್ದು, ಫೆ.1ರಂದು ನವಗ್ರಹಗಳ ಸ್ಥಾಪನೆ, 2ರಂದು ಸ್ಥಂಭ ಗಣಪತಿ ಮತ್ತು ನಾಗ ದೇವತೆಗಳ ಪ್ರತಿಷ್ಠಾಪನೆ ನಡೆಯಲಿದ್ದು, ನಂತರ ದಿವ್ಯ ಸಂಕೀರ್ತನೆ, ನಾದಸ್ವರ, ಪ್ರಸಾದ ವಿನಿಯೋಗ ನೆರವೇರಲಿದೆ. ಈ ಧಾರ್ಮಿಕ ಕಾರ್ಯದಲ್ಲಿ ಪ್ರಮುಖ ಸೇವಕರ್ತರಾದ ವಿ. ಮೋಹನ್, ಆರ್.ಸತೀಶ್, ಆರ್.ದೇವರಾಜ್, ಕೇಬಲ್ ಶಿವು, ತಾಲೂಕು ದಂಡಾಧಿಕಾರಿ ಶಶಿಧರ್ ಮಾಡ್ಯಾಳ್, ಪುರಸಭಾಧ್ಯಕ್ಷೆ ಸುಧಾ ನಿರಂಜನ್, ಉಪಾಧ್ಯಕ್ಷೆ ಭುವನಾ ದಿನೇಶ್, ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದ್ದಾರೆ.

### ಫೆ.1ರಿಂದ ನಗರ ವಿವಿಯಲ್ಲಿ ಮೆಗಾ ಕೋಚಿಂಗ್ ಎಕ್ಸ್‌ಪೋ

**ಬೆಂಗಳೂರು:** ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜ್ಞಾನಜ್ಯೋತಿ ಆವರಣದಲ್ಲಿ ಫೆ.1 ಮತ್ತು 2ರಂದು 'ಕೋಚಿಂಗ್ ಗುರು' ಹೆಸರಿನಲ್ಲಿ ಮೆಗಾ ಕೋಚಿಂಗ್ ಎಕ್ಸ್‌ಪೋ ನಡೆಯಲಿದೆ. ಈ ಎಕ್ಸ್‌ಪೋನಲ್ಲಿ ನೀಟ್, ಸಿಇಟಿ, ಜೆಇಇ, ಕೆಪಿಎಸ್ಸಿ, ಯುಪಿಎಸ್ಸಿ, ಕ್ಯಾಟ್, ಸಿಎ, ಪಿಎಸ್‌ಐ, ಪಿಡಿಒ ಸೇರಿದಂತೆ ವಿವಿಧ ಪರೀಕ್ಷೆಗಳಿಗೆ ಮಾರ್ಗದರ್ಶನ ಮಾಡುತ್ತಿರುವ ಕೋಚಿಂಗ್ ಸೆಂಟರ್‌ಗಳು ಒಂದೇ ವೇದಿಕೆಯಲ್ಲಿ ಭಾಗವಹಿಸಲಿವೆ. ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧವಾಗುತ್ತಿರುವ ವಿದ್ಯಾರ್ಥಿಗಳಿಗೆಂದೇ ಈ ವಿನೂತನ ಎಕ್ಸ್‌ಪೋ ಆಯೋಜಿಸಲಾಗುತ್ತಿದೆ. ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧವಾಗುವ ವಿದ್ಯಾರ್ಥಿಗಳು ಏನೆಲ್ಲಾ ಕ್ರಮಗಳನ್ನು ಅನುಸರಿಸಬೇಕು, ಯಾವ ಕೋಚಿಂಗ್ ಸೆಂಟರ್ ಆಯ್ಕೆ ಮಾಡಿಕೊಳ್ಳಬೇಕು, ಅವರಿಂದ ಯಾವ ರೀತಿಯ ಮಾರ್ಗದರ್ಶನ ಪಡೆಯಬೇಕು ಎನ್ನುವ ಬಗ್ಗೆ ವಿದ್ಯಾರ್ಥಿಗಳಿಗೆ ಎಕ್ಸ್‌ಪೋದಲ್ಲಿ ಮಾರ್ಗದರ್ಶನ ಸಿಗಲಿದೆ. ಆಸಕ್ತ ವಿದ್ಯಾರ್ಥಿಗಳು ತಮ್ಮ ಪೋಷಕರೊಂದಿಗೆ ಎಕ್ಸ್‌ಪೋದಲ್ಲಿ ಭಾಗವಹಿಸುವಂತೆ ಕೋರಲಾಗಿದೆ.

### ಕನ್ನಡಿಗರಿಗಾಗಿ ಉದ್ಯೋಗ ಪೋರ್ಟಲ್ ರಚಿಸಿ: ಬಿಳಿಮಲೆ ಒತ್ತಾಯ

**ಬೆಂಗಳೂರು:** ನಿರುದ್ಯೋಗಿ ಕನ್ನಡಿಗರ ಅನುಕೂಲಕ್ಕಾಗಿ ಸರ್ಕಾರದಿಂದಲೇ ಉದ್ಯೋಗ ಪೋರ್ಟಲ್ ಸೃಜನೆ ಮತ್ತು ಸರ್ಕಾರಿ ಶಾಲೆಗಳ ಆಸ್ತಿ ಒತ್ತುವರಿ ತೆರವಿಗೆ ವಿಶೇಷ ಅಭಿಯಾನ ನಡೆಸುವ ಬಗ್ಗೆ ಮುಂಬರುವ ಬಜೆಟ್‌ನಲ್ಲಿ ಘೋಷಣೆ ಮಾಡಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಒತ್ತಾಯಿಸಿದ್ದಾರೆ. 'ಕುಶಲ ಕನ್ನಡಿಗ' ಯೋಜನೆ ಅಡಿಯಲ್ಲಿ ಪ್ರತಿಭಾವಂತ ನಿರುದ್ಯೋಗಿ ಕನ್ನಡಿಗರು ತಮ್ಮ ಸ್ವ-ವಿವರಗಳನ್ನು ದಾಖಲಿಸಲು ಸರ್ಕಾರ ಪೋರ್ಟಲ್ ಸೃಜನೆಗೆ ಮುಂದಾಗಬೇಕು ಎಂದು ಅವರು ಹೇಳಿದ್ದಾರೆ.

### ಬಾಗಲಗುಂಟೆ ವಾರ್ಡ್‌ಗೆ ಜೆಡಿಎಸ್ ಅಧ್ಯಕ್ಷ ನೇಮಕ

**ಪೀಣ್ಯ ದಾಸರಹಳ್ಳಿ:** ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಮುನಿಸ್ವಾಮಿ ಅವರ ಅನುಮೋದನೆ ಮೇರೆಗೆ ಬಾಗಲಗುಂಟೆ ಪಕ್ಷದ ವಾರ್ಡ್ ಅಧ್ಯಕ್ಷರನ್ನಾಗಿ 3ನೇ ಭಾರಿಗೆ ಕೆ.ಹನುಂತರಾಯಪ್ಪ ಅವನ್ನು ನೇಮಕ ಮಾಡಲಾಗಿದೆ. ಹನುಮಂತರಾಯಪ್ಪ ಮಾತನಾಡಿ, ಪಕ್ಷದ ಜವಾಬ್ದಾರಿ ವಹಿಸಿಕೊಂಡು ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಜನತಾದಳ (ಜಾತ್ಯಾತೀತ) ಪಕ್ಷವನ್ನು ಸಂಘಟಿಸಿ ಬಲವರ್ಧನೆಗೊಳಿಸುತ್ತೇನೆ ಎಂದರು. ಈ ವೇಳೆ ಪಕ್ಷದ ರಾಜ್ಯ ಉಪಾಧ್ಯಕ್ಷ ಅಂದಾನಪ್ಪ, ಕ್ಷೇತ್ರದ ಅಧ್ಯಕ್ಷ ಮುನಿಸ್ವಾಮಿ, ಕಾರ್ಯಾಧ್ಯಕ್ಷ ಮುನೇಗೌಡ, ಪ್ರಧಾನ ಕಾರ್ಯದರ್ಶಿ ನಟರಾಜು ಇದ್ದರು.

## ವ್ಯಕ್ತಿ ಸ್ವತಂತ್ರವಾಗಿ ಬದುಕಲು ಶಿಕ್ಷಣದಿಂದ ಸಾಧ್ಯ: ಕುಸುಮಾ

### ಕನ್ಯಾಕುಮಾರಿ ವಿದ್ಯಾಸಂಸ್ಥೆಯ ಶಾಲಾ ವಾರ್ಷಿಕೋತ್ಸವ



ಜ್ಞಾನಭಾರತಿ ವಾರ್ಡ್ ಕೆಂಗುಂಟೆ ಬಳಿಯ ಕನ್ಯಾಕುಮಾರಿ ವಿದ್ಯಾಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ 'ಖುಷಿ -2025' ಶಾಲಾ ವಾರ್ಷಿಕೋತ್ಸವದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಕಾಂಗ್ರೆಸ್ ನಾಯಕಿ ಕುಸುಮಾ ಹನುಮಂತರಾಯಪ್ಪ, ಹಾಸ್ಯ ನಟ ಸಾಧುಕೋಕಿಲ ಇದ್ದರು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು ದಕ್ಷಿಣ

ಈ ಹಿಂದೆ ಶಾಲೆಗಳಲ್ಲಿ ಶಿಕ್ಷೆ ನೀಡಿ ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸುತ್ತಿದ್ದರು. ಆದರೆ, ಇಂದು ಶಿಕ್ಷಕರಿಗೆ ಆ ಸ್ವಾತಂತ್ರ್ಯ ಇಲ್ಲವಾಗಿದ್ದು, ಪೊಲೀಸರು ಶಿಕ್ಷಕರ ಜವಾಬ್ದಾರಿ ಹೊರುವಂತಾಗಿದೆ ಎಂದು ಕಾಂಗ್ರೆಸ್ ನಾಯಕಿ ಕುಸುಮಾ ಹನುಮಂತರಾಯಪ್ಪ ಕಳವಳ ವ್ಯಕ್ತಪಡಿಸಿದರು.

ಜ್ಞಾನಭಾರತಿ ವಾರ್ಡ್ ಕೆಂಗುಂಟೆ ಬಳಿಯ ಕನ್ಯಾಕುಮಾರಿ ವಿದ್ಯಾಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ 'ಖುಷಿ -2025' ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿ, ಶಿಕ್ಷಣವೊಂದೇ ವ್ಯಕ್ತಿಯನ್ನು ಸ್ವತಂತ್ರವಾಗಿ ಬದುಕಲು ಅವಕಾಶ ಸೃಷ್ಟಿಸುತ್ತದೆ. ಅದರಲ್ಲೂ ಹೆಣ್ಣು ಮಕ್ಕಳು ವಿದ್ಯಾವಂತರಾಗಬೇಕು. ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಮತ್ತು ಸಂಸ್ಕಾರ ಕೊಡುವುದರ ಮೂಲಕ ಒಳ್ಳೆಯ ಪೋಷಕರಾಗಿ ಎಂದರು.

ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಹಾಗೂ ಹಾಸ್ಯ ನಟ ಸಾಧುಕೋಕಿಲ ಮಾತನಾಡಿದರು. ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತ ರಾಯಪ್ಪ, ಜೆಎಸ್ ಕಾಲೇಜಿನ ಮುಖ್ಯಸ್ಥ ಜಯರಾಮ ಶೆಟ್ಟಿ, ಕನ್ಯಾಕುಮಾರಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಡಾ.ಎಚ್. ತುಕಾರಾಂ, ಪ್ರಾಂಶುಪಾಲೆ ಸುವರ್ಣ ಇದ್ದರು.

## ಬಡಮಕ್ಕಳಿಗೆ ಗುಣಮಟ್ಟದ ಶಿಕ್ಷಣ: ನಾಗರಾಜ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಶ್ರೀ ಶಿಕ್ಷಣ ಸಮಿತಿ (ಟ್ರಸ್ಟ್) ಕಳೆದ 56 ವರ್ಷಗಳಿಂದ ಬಡಮಕ್ಕಳಿಗೆ ಉಚಿತ, ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದು, ಪಾಲಕರು, ಶಿಕ್ಷಕರ ಸಹಕಾರದಿಂದ ಬೃಹತ್ ಸಂಸ್ಥೆಯಾಗಿ ಬೆಳೆದಿದೆ ಎಂದು ಪ್ರಾಚಾರ್ಯ ಜೆ.ಎಸ್. ನಾಗರಾಜ ಹೇಳಿದರು.

ಶ್ರೀ ಶಿಕ್ಷಣ ಸಮಿತಿಯ ಮಾಗಡಿ ರಸ್ತೆಯ ವಿದ್ಯಾರಣ್ಯ ನಗರದ ಶ್ರೀ ಮಂಜುನಾಥ ವಿದ್ಯಾಲಯದ ಕನ್ನಡ ಹಾಗೂ ಆಂಗ್ಲ ಮಾಧ್ಯಮ ನರ್ಸರಿ ಪ್ರೈಮರಿ ಹಾಗೂ ಪ್ರೌಢಶಾಲೆಯ ಕಲೋತ್ಸವ-2025 ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 1200ಕ್ಕೂ ಹೆಚ್ಚು ಬಡಮಕ್ಕಳು ಮತ್ತು ಆರ್ಥಿಕವಾಗಿ ಹಿಂದುಳಿದ ಕನ್ನಡ ಮಾಧ್ಯಮ ಮಕ್ಕಳಿಗೆ ಶುಲ್ಕವಿಲ್ಲದೆ ಉಚಿತ ಶಿಕ್ಷಣ ಹಾಗೂ ಇಂಗ್ಲಿಷ್ ಮಾಧ್ಯಮದ ಮಕ್ಕಳಿಗೆ ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣವನ್ನು ನುರಿತ ಹಾಗೂ ಉತ್ತಮ ಶಿಕ್ಷಕರಿಂದ ನೀಡಲಾಗುತ್ತಿದೆ ಎಂದರು. ಮುಖ್ಯ ಅತಿಥಿ ಎಸ್.ನಾಗಣ್ಣ, ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ ಅಧ್ಯಕ್ಷ ಎಂ.ಜಿ.ರಾಜಗೋಪಾಲ ಮಾತನಾಡಿದರು.

## ಕಟ್ಟಡ ಆಸ್ತಿ ತೆರಿಗೆ ಬಾಕಿ: 60 ಜನ ಸುಸ್ತಿದಾರರಿಗೆ ಬಿಬಿಎಂಪಿಯಿಂದ ಹರಾಜು ನೋಟಿಸ್ ಜಾರಿ

### ಮಹದೇವಪುರ ವಲಯದ 6 ಉಪ ವಿಭಾಗಗಳ 60 ಸ್ಥಿರಾಸ್ತಿ ಹರಾಜಿಗೆ ಪಾಲಿಕೆ ಸಿದ್ಧತೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಹಲವು ವರ್ಷದಿಂದ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡ ಬಿಬಿಎಂಪಿಯ ಮಹದೇವಪುರ ವಲಯದ ಆರು ಉಪ ವಿಭಾಗಗಳ 60 ಸ್ಥಿರಾಸ್ತಿಗಳನ್ನು ಹರಾಜು ಹಾಕುವುದಾಗಿ ಆಸ್ತಿ ಮಾಲೀಕರಿಗೆ ಬಿಬಿಎಂಪಿ ಗುರುವಾರ ನೋಟಿಸ್ ನೀಡಿದೆ.




ಪ್ರಾಯೋಗಿಕವಾಗಿ ನೀಡಲಾದ ಆಸ್ತಿ ಹರಾಜು ನೋಟಿಸ್ ಯಶಸ್ವಿಯಾಗಿರುವ ಹಿನ್ನೆಲೆಯಲ್ಲಿ ಬಿಬಿಎಂಪಿಯು ಕಂದಾಯ ಉಪ ವಿಭಾಗವಾರು ಸುಸ್ತಿದಾರರಿಗೆ ಹರಾಜು ನೋಟಿಸ್ ನೀಡಲು ಸಿದ್ಧತೆ ಮಾಡಿಕೊಂಡಿದೆ. ಮೊದಲ ಹಂತವಾಗಿ ಗುರುವಾರ ಮಹದೇವಪುರ ವಲಯದ ಆರು ಕಂದಾಯ ಉಪ ವಿಭಾಗಗಳಾದ ಹೊರಮಾವು, ಎಚ್‌ಎಎಲ್, ಕೆಆರ್ ಪುರ, ಮಾರತಹಳ್ಳಿ, ಹೂಡಿ ಹಾಗೂ ವೈಟ್ ಫೀಲ್ಡ್ ತಲಾ 10 ಆಸ್ತಿ ಮಾಲೀಕರಿಗೆ ಫೆ.13ರ ಮಧ್ಯಾಹ್ನ 12 ಗಂಟೆಗೆ ಹರಾಜು ಹಾಕಲಾಗುವುದು ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

**9 ಸಾವಿರ ಬಾಕಿಗೂ ಆಸ್ತಿ ಹರಾಜು:** ಗುರುವಾರ ಆಸ್ತಿ ಹರಾಜು ನೋಟಿಸ್ ನೀಡಿದ 60 ಆಸ್ತಿ ಮಾಲೀಕರ ಪೈಕಿ ಮಾರತ್ ಹಳ್ಳಿಯ ಉಪ ವಿಭಾಗದ ವ್ಯಾಪ್ತಿಯ ಮಹೇಶ್ ರೆಡ್ಡಿ ಎಂಬುವವರು ಅತಿ ಹೆಚ್ಚು ಅಂದರೆ 38, 07,774 ರು. ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡವರಾಗಿದ್ದಾರೆ. ಎಚ್‌ಎಎಲ್ ಉಪ ವಿಭಾಗದ ವ್ಯಾಪ್ತಿಯ ರಾಜೀವ್ ನಾರಾಯಣ್ ಎಂಬುವವರು ಅತಿ ಕಡಿಮೆ 9,887 ರು. ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದು, ಅವರಿಗೂ ಆಸ್ತಿ ಹರಾಜು ನೋಟಿಸ್ ನೀಡಲಾಗಿದೆ.

### ಎಲ್ಲರಿಗಿಂತ ಮೊದಲೇ ತಿಳಿವುದು ಇಲ್ಲೇ!

ವಲಯವಾರು ಪ್ರಾಯೋಗಿಕವಾಗಿ ನೀಡಲಾದ ಆಸ್ತಿ ಹರಾಜು ನೋಟಿಸ್ ಯಶಸ್ವಿಯಾಗಿರುವ ಹಿನ್ನೆಲೆಯಲ್ಲಿ ಬಿಬಿಎಂಪಿಯು ಕಂದಾಯ ಉಪ ವಿಭಾಗವಾರು ಒಟ್ಟು 640 ಆಸ್ತಿ ತೆರಿಗೆ ಸುಸ್ತಿದಾರರಿಗೆ ಒಂದೆರಡು ದಿನದಲ್ಲಿ ಹರಾಜು ನೋಟಿಸ್ ನೀಡಲು ಸಿದ್ದತೆ ಮಾಡಿಕೊಂಡಿದೆ ಎಂದು 'ಕನ್ನಡಪ್ರಭ' ಗುರುವಾರ ವರದಿ ಮಾಡಿತ್ತು.




## ₹55 ಕೋಟಿ ಮೌಲ್ಯದ ಆಸ್ತಿ ವಶಕ್ಕೆ ಪಡೆದ ಬಿಡಿಎ

### ಬನಶಂಕರಿ 2ನೇ ಹಂತದ ಬಡಾವಣೆ, ಉತ್ತರಹಳ್ಳಿ ಸಮೀಪ ಒತ್ತುವರಿ ತೆರವು ಕಾರ್ಯಾಚರಣೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಒತ್ತುವರಿ ತೆರವು ಕಾರ್ಯಾಚರಣೆ ಮುಂದುವರೆಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಬುಧವಾರ ಮತ್ತು ಗುರುವಾರ ಸೇರಿ ಒಟ್ಟು ₹55 ಕೋಟಿ ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ.

ಬನಶಂಕರಿ 2ನೇ ಹಂತದ ಬಡಾವಣೆಯಲ್ಲಿ ಒತ್ತುವರಿಯಾಗಿದ್ದ ಅಂದಾಜು 35 ಕೋಟಿ ರು. ಮೌಲ್ಯದ ನಾಗರಿಕ ಸೌಲಭ್ಯ ನಿವೇಶನವನ್ನು ಗುರುವಾರ ಬಿಡಿಎ ವಶಪಡಿಸಿಕೊಂಡಿದ್ದು, ಬುಧವಾರ ಉತ್ತರಹಳ್ಳಿ ಹೋಬಳಿಯ ಆವಲಹಳ್ಳಿಯಲ್ಲಿ ಅಂದಾಜು 25 ಕೋಟಿ ರು. ಮೌಲ್ಯದ ಪ್ರಾಧಿಕಾರಕ್ಕೆ ಸೇರಿದ ಭೂಮಿಯನ್ನು ವಶಪಡಿಸಿಕೊಂಡಿದೆ.

ಬೆಂಗಳೂರು ದಕ್ಷಿಣ ತಾಲೂಕು, ಉತ್ತರಹಳ್ಳಿ ಹೋಬಳಿ, ಕತ್ರಿಗುಪ್ಪೆ ಗ್ರಾಮದ (ಬನಶಂಕರಿ 2ನೇ ಹಂತ) ಸರ್ವೆ ನಂ. 15/1ರಲ್ಲಿನ 18,513 ಚದರ ಅಡಿಯ ಪ್ರದೇಶವನ್ನು ಒತ್ತುವರಿ ಮಾಡಿಕೊಳ್ಳಲಾಗಿತ್ತು. ಹಲವು ಬಾರಿ ನೋಟಿಸ್ ನೋಡಿ ಒತ್ತುವರಿ ತೆರವುಗೊಳಿಸುವಂತೆ ಬಿಡಿಎ ಸೂಚನೆ ನೀಡಿದ್ದರೂ ಒತ್ತುವರಿದಾರರು ಜಾಗ ಖಾಲಿ ಮಾಡಿರಲಿಲ್ಲ. ಈ ಹಿನ್ನೆಲೆಯಲ್ಲಿ ಗುರುವಾರ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿದ ಬಿಡಿಎ ಅಧಿಕಾರಿಗಳು ಸ್ಥಳದಲ್ಲಿದ್ದ ಶೆಡ್, ಗುಜರಿ ವಾಹನಗಳನ್ನು ತೆರವುಗೊಳಿಸಿ, ನಿವೇಶನವನ್ನು ವಶಕ್ಕೆ ಪಡೆದರು. ಈ ಕಾರ್ಯಾಚರಣೆಯಲ್ಲಿ ಬಿಡಿಎ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕರು, ದಕ್ಷಿಣ ವಿಭಾಗದ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಸೇರಿದಂತೆ ಇತರರು ಪಾಲ್ಗೊಂಡಿದ್ದರು ಎಂದು ಬಿಡಿಎ ಮಾಹಿತಿ ನೀಡಿದೆ.



### 16,700 ಚದರ ಅಡಿ ಪ್ರದೇಶ ತೆರವು

ಬೆಂಗಳೂರು ದಕ್ಷಿಣ ತಾಲೂಕು, ಉತ್ತರಹಳ್ಳಿ ಹೋಬಳಿ, ಆವಲಹಳ್ಳಿ ಗ್ರಾಮದ ಸರ್ವೆ ನಂ.43/1 ಮತ್ತು 43/8ರಲ್ಲಿ ಒತ್ತುವರಿ ಮಾಡಿಕೊಂಡು 16,700 ಚದರ ಅಡಿ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಿಸಲಾಗಿದ್ದ ಶೆಡ್‌ಗಳು ಮತ್ತು ಕಾಂಪೌಂಡ್ ಅನ್ನು ಬುಧವಾರ ಬಿಡಿಎ ಅಧಿಕಾರಿಗಳು, ಪೊಲೀಸರ ನೆರವಿನೊಂದಿಗೆ ತೆರವುಗೊಳಿಸಿದರು.

**ಧರಣಿ** | ಕನಿಷ್ಠ ವೇತನಕ್ಕಾಗಿ ಆಗ್ರಹ | 4ನೇ ದಿನಕ್ಕೆ ಕಾಲಿಟ್ಟ ಹೋರಾಟ

## ಮುಂದುವರೆದ ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕನಿಷ್ಠ ವೇತನ ನಿಗದಿ ಪಡಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಪಟ್ಟು ಹಿಡಿದು ಧರಣಿ ನಡೆಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಹೋರಾಟ ನಾಲ್ಕನೇ ದಿನಕ್ಕೆ ಕಾಲಿಟ್ಟಿದೆ.

ಗುರುವಾರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು (ಐಸಿಡಿಎಸ್) ಬಿ.ಎಚ್.ನಿಶ್ಚಲ್ ಸೇರಿ ಇತರೆ ಅಧಿಕಾರಿಗಳು ಆಗಮಿಸಿ ಮನವಿ ಸ್ವೀಕರಿಸಿ, ರಾಜ್ಯ ಸರ್ಕಾರ ಬಜೆಟ್ ವೇಳೆ ಈ ಸಂಬಂಧ ನಿರ್ಣಯ ಕೈಗೊಳ್ಳಲಿದೆ. ಹೀಗಾಗಿ ಹೋರಾಟ ನಿಲ್ಲಿಸಿ ಕರ್ತವ್ಯಕ್ಕೆ ಮರಳುವಂತೆ ಕೋರಿದರು. ಆದರೆ, ಈ ಮನವೊಲಿಕೆಗೆ ಒಪ್ಪದ ಅಂಗನವಾಡಿ ಸಿಬ್ಬಂದಿ ಹೋರಾಟ ಮುಂದುವರಿಸಿದ್ದಾರೆ. 'ಗೌರವಧನದ ಬದಲು, ಕಾರ್ಯಕರ್ತೆಯರಿಗೆ ₹25, 000, ಅಂಗನವಾಡಿ ಸಹಾಯಕಿಯರಿಗೆ ₹ 12 ಸಾವಿರ ಕನಿಷ್ಠ ವೇತನವನ್ನು ನಿಗದಿಮಾಡಬೇಕು ಎಂದು ಸಂಘಟನೆ ಯ ರಾಜ್ಯ ಕಾರ್ಯದರ್ಶಿ ಉಮಾಮಣಿ ಒತ್ತಾಯಿಸಿದರು.




**ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್**
(ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)

ನೋಂದಾಯಿತ ಕಛೇರಿ : ದಿ ಫೇರ್‌ವೇ, ನೆಲ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು-560071.

**ಇ-ಹರಾಜು ಸೂಚನೆ**

**2002ರ ಭದ್ರತಾ ಹಿತಾಸಕ್ತಿ ನಿಯಮಗಳ ಪ್ರಾವಿಸೋ ರೂಲ್ 8(6) ಮತ್ತು 9 ರೊಂದಿಗೆ ಓದಿಕೊಳ್ಳಬೇಕಾದ ಸೆಕ್ಯುರೈಟೆಜೇಷನ್ ಅಂಡ್ ರೀಕನ್ಸಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್ ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ (ಸರ್ಫೇಸಿ ಕಾಯಿದೆ), 2002 ರಡಿ ಆಸ್ತಿಗಳ ಇ-ಹರಾಜು ಮಾರಾಟಕ್ಕಾಗಿ ಸಾರ್ವಜನಿಕ ಸೂಚನೆ**

ಆದಾಗ್ಯೂ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಸರ್ಫೇಸಿ ಕಾಯಿದೆಯ ಕಲಂ 13(4)ರಡಿ ಕೆಳಕಂಡ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ. ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಮಾಹಿತಿ ನೀಡುವುದೇನೆಂದರೆ ಸಾಲ ಪಡೆಯಲು ಸಾಲಗಾರರು ಅಡಮಾನ ಮಾಡಿರುವ ಆಸ್ತಿಗಳನ್ನು ಬ್ಯಾಂಕಿಗೆ ಬಾಕಿಯಾಗಿರುವ ಸಾಲಗಳ ವಸೂಲಾತಿಗಾಗಿ ''ಎಲ್ಲಿ ಹೇಗಿದೆಯೋ ಹಾಗೆಯೇ'' ಹಾಗೂ ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಆನ್‌ಲೈನ್ ಹರಾಜು (ಇ-ಹರಾಜು) ಮೂಲಕ ಸರ್ಫೇಸಿ ಕಾಯಿದೆಯಂತೆ ಇ-ಹರಾಜು ಮಾರಾಟ ಮಾಡಲಾಗುತ್ತದೆ.

| ಕ್ರ. ಸಂ. | ಸಾಲದ ಖಾತಾ ಸಂಖ್ಯೆ | ಮೂಲ ಸಾಲಗಾರ/ ಸಹ-ಸಾಲಗಾರ/ ಜಾಮೀನುದಾರ/ಹೆಸರು | 13-2 ನೋಟೀಸ್ ದಿನಾಂಕ | ಸ್ವಾಧೀನತೆಯ ದಿನಾಂಕ | ಪ್ರಸ್ತುತ ಬಾಕಿ ಮೊತ್ತ ದಿನಾಂಕ 29.01.2025 ರಂದು ಇದ್ದಂತೆ | ಆಸ್ತಿಯ ಪರಿಶೀಲನೆಯ ದಿನಾಂಕ ಮತ್ತು ಸಮಯ | ಮೀಸಲು ಬೆಲೆ ಐಎನ್‌ಆರ್ | ಅರ್ನೆಸ್ಟ್ ಮನಿ ಡಿಪಾಸಿಟ್ (ಇಎಂಡಿ) ಐಎನ್‌ಆರ್ | ಇ-ಹರಾಜಿನ ದಿನಾಂಕ ಮತ್ತು ಸಮಯ | ಬಿಡ್ ಸಲ್ಲಿಸಲು ಸ್ಥಳ ಮತ್ತು ಕೊನೆಯ ದಿನಾಂಕ ಮತ್ತು ಸಮಯ |
|---|---|---|---|---|---|---|---|---|---|---|
| 1 | 32519440000064 | 1) ಶ್ರೀಮತಿ ಕವಿತ ಬಿ, ಮಾಲೀಕರು: ಮೆ॥ ಶ್ರೀ ಲಕ್ಷ್ಮಿ ಲೇಡಿಸ್ ಫ್ಯಾಷನ್ ಟೈಲರ್, ಅಲ್ಲದೇ: ಮೆ॥ ಶ್ರೀ ಲಕ್ಷ್ಮಿ ಲೇಡಿಸ್ ಫ್ಯಾಷನ್ ಟೈಲರ್, 2) ಶ್ರೀ ವೆಂಕಟರಾಮುಡು ಕೆ | 06.09.2024 | 12.11.2024 | ರೂ. 8,65,332.67 (ಎಂಟು ಲಕ್ಷದ ಅರವತ್ತೈದು ಸಾವಿರದ ಮುನ್ನೂರ ಮುವತ್ತೆರಡು ರೂ. ಮತ್ತು ಅರವತ್ತೇಳು ಪೈಸೆ ಮಾತ್ರ) | 13.02.2025 Time: 09:30 AM to 05:00 PM | ರೂ. 14,72,000/- (ಹದಿನಾಲ್ಕು ಲಕ್ಷದ ಎಪ್ಪತ್ತೆರಡು ಸಾವಿರ ರೂ. ಮಾತ್ರ) | ರೂ. 1,47,200/- (ಒಂದು ಲಕ್ಷದ ನಲವತ್ತೇಳು ಸಾವಿರದ ಇನ್ನೂರು ರೂ. ಗಳು ಮಾತ್ರ) | 19.02.2025 @ 02:00 PM | 18.02.2025, ಸಂಜೆ 05.00 ಗಂಟೆಯ ಒಳಗೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಮುಖ್ಯ ಕಛೇರಿ: ದಿ ಫೇರ್‌ವೇ, ನೆಲಮಹಡಿ ಮತ್ತು ಮೊದನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು- 560071. |
| | ಭದ್ರತಾ ಆಸ್ತಿಯ ವಿವರಣೆ: ಸಕಲ ಸಮಸ್ತವೂ ಸೇರಿದ ಆಸ್ತಿ, ಆಸ್ತಿಯ ಸಂ. 133/8, ಬಿಬಿಎಂಪಿ ಖಾತಾ ಸಂ. 133/8, ಕುಂಬೇನ ಅಗ್ರಹಾರ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲೂಕು, ಈಗಿನ ಬಿಬಿಎಂಪಿ ವಾಪ್ತಿ ಮತ್ತು ಚಕ್ಕುಬಂದಿ- ಪೂರ್ವಕ್ಕೆ- ಸುಬ್ರಮಣಿ ರವರ ಆಸ್ತಿ, ಪಶ್ಚಿಮದಿಂದ: ರಾಮಕೃಷ್ಣ ರವರ ಆಸ್ತಿ, ಉತ್ತರದಿಂದ: ರಸ್ತೆ ಮತ್ತು ಮಾರಪ್ಪ ರವರ ಆಸ್ತಿ, ದಕ್ಷಿಣದಿಂದ: ಶಿಲ್ಪ ರವರ ಆಸ್ತಿ. ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 25 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 43.6 ಅಡಿ, ಒಟ್ಟು ಅಳತೆ: 1090 ಚದರ ಅಡಿ. | | | | | | | | | |

ಆಸ್ತಿಗಳನ್ನು ''ಎಲ್ಲಿ ಹೇಗಿದೆಯೋ ಹಾಗೆಯೇ'' ಮತ್ತು ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಮಾರಾಟ ಮಾಡಲಾಗುವುದು. ಇ-ಹರಾಜನ್ನು 'ಆನ್ ಲೈನ್' ಮೂಲಕ ನಡೆಸಲಾಗುತ್ತದೆ. ಹರಾಜನ್ನು ಬ್ಯಾಂಕ್ ಅಂಗೀಕೃತ ಸೇವಾ ಒದಗಿಸುವವರಾದ ಮೆ॥-4 ಕ್ಲೋಸರ್ ಮೂಲಕ https://bankauctions.in & www.foreclosureindia.com. ಎಂಬುವ ವೆಬ್‌ಪೋರ್ಟಲ್‌ನಲ್ಲಿ ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮತ್ತು ವಿವರಗಳಿಗಾಗಿ, ನೆರವಿಗಾಗಿ, ಕ್ರಮಗಳ ತಿಳಿದುಕೊಳ್ಳುವುದಕ್ಕಾಗಿ ಮತ್ತು ಇ-ಹರಾಜು ಆನ್‌ಲೈನ್ ತರಬೇತಿ ಪಡೆದುಕೊಳ್ಳುವುದಕ್ಕಾಗಿ ಭಾವಿ ಬಿಡ್‌ದಾರರು ಮೆ॥-4 ಕ್ಲೋಸರ್ ಸಂಪರ್ಕ ಶ್ರೀ ಎಂ ಶ್ರೀನಿವಾಸಲು, ಸಂಪರ್ಕ ಸಂ. 8142000809. Email id: info@bankauctions.in / srinivas@bankauctions.in. ಇವರನ್ನು ಸಂಪರ್ಕಿಸುವುದು.

ಷರತ್ತು ಮತ್ತು ನಿಬಂಧನೆಗಳ ಹೆಚ್ಚಿನ ವಿವರಗಳಿಗಾಗಿ ಹಾಗೂ ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕಾಗಿ ಹಾಗೂ ಆಸ್ತಿ ಸಂಬಂಧಿತ ಯಾವುದೇ ವಿವರಗಳಿಗಾಗಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಅಧೀಕೃತ ಅಧಿಕಾರಿಗಳಾದ ಶ್ರೀ ರಂಜನ್ ನಾಯಕ್, (ಮೊ.ಸಂ. 6362951653), ಶ್ರೀ ಉಮೇಶ್ (ಮೊಬೈಲ್ ಸಂ. 8050149617) ಮತ್ತು ಶ್ರೀಮತಿ ಸಾಯಿದಾ (ಮೊಬೈಲ್ ಸಂ. 7400445147) ಅನ್ನು ಸಂಪರ್ಕಿಸುವುದು. ಅಧಿಕೃತ ಅಧಿಕಾರಿಗಳ ಉತ್ತಮ ತಿಳುವಳಿಕೆ ಮತ್ತು ಮಾಹಿತಿಗೆ ಬಂದಂತೆ ಆಸ್ತಿಗಳ ಮೇಲೆ ಯಾವುದೇ ಋಣಭಾದ್ಯತೆಗಳು ಇಲ್ಲ. ಆದಾಗ್ಯೂ, ಇಚ್ಛೆಯುಳ್ಳ ಬಿಡ್‌ದಾರರು ಬಿಡ್ ಸಲ್ಲಿಸುವ ಮುಂಚೆ ಆಸ್ತಿಯ ಋಣಭಾದ್ಯತೆಗಳು ಹಾಗೂ ಸ್ವಾಮ್ಯ, ಮುಂತಾದವುಗಳ ಬಗ್ಗೆ ಅವರದೇ ಸ್ವತಂತ್ರ ವಿಚಾರಣೆಗಳನ್ನು ನಡೆಸಿ ತಿಳಿದುಕೊಳ್ಳಬಹುದಾಗಿದೆ. ಷರತ್ತಿನ ಬಿಡ್‌ಗಳನ್ನು ಒಪ್ಪಿಕೊಳ್ಳುವುದಿಲ್ಲ. ಮೇಲೆ ಹೆಸರಿಸಲಾದ ಸಾಲಗಾರರು/ ಜಾಮೀನುದಾರರು/ ಅಡಮಾನದಾರರುಗಳಿಗೆ ಈ ಮೂಲಕ ಅಧಿಸೂಚಿಸುವುದೇನೆಂದರೆ ಮೇಲೆ ತಿಳಿಸಿದ ಬಾಕಿ ಮೊತ್ತ ಜೊತೆಗೆ ಅಪ್ ಟು ಡೇಟ್ ಬಡ್ಡಿ ಹಾಗೂ ಸಾದಿಲ್ವಾರು ವೆಚ್ಚಗಳನ್ನು ಹರಾಜಿನ ದಿನಾಂಕಕ್ಕೆ ಮುಂಚೆ ಪಾವತಿ ಮಾಡಬೇಕು. ವಿಫಲರಾದಲ್ಲಿ ಮೇಲಿನ ಆಸ್ತಿಯನ್ನು ಮಾರಾಟ ಮಾಡಿ ಸಾಲದ ಬಾಕಿಗಾಗಿ ಹೊಂದಿಸಿಕೊಳ್ಳಲಾಗುವುದು. ಇನ್ನೂ ಬಾಕಿ ಉಳಿದ ಪಕ್ಷದಲ್ಲಿ ಅದನ್ನು ಬಡ್ಡಿ ಮತ್ತು ವೆಚ್ಚಗಳೊಂದಿಗೆ ವಸೂಲು ಮಾಡಿಕೊಳ್ಳಲಾಗುವುದು.

ದಿನಾಂಕ: 31.01.2025, ಸ್ಥಳ: ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್